ಮಾದರಿಯಾಗಿಟ್ಟುಕೊಂಡು ಈ ಭಾವಚಿತ್ರ ರಚಿಸುವಾಗ ತದ್ರೂಪು ಹೋಲಿಕೆ ಬರಲೇಬೇಕಾಗುತ್ತದೆ. ಸ್ಕೆಚ್‌ನಲ್ಲಿ ರೂಪು ಸರಿಯಾಗಿಯೇ ಮೂಡಿರುತ್ತದೆ. ಅದಕ್ಕೆ ಬಣ್ಣ ನೀಡುವಾಗ ನೋಡಿ, ನಿಜವಾದ ಸವಾಲು ಎದುರಾಗುವುದು. ಅದರಲ್ಲೂ ಜಲವರ್ಣವೆಂದರೆ ಕೃತಿ ಪೂರ್ಣವಾಗುವರೆಗೂ ಮನದೊಳಗೆ ಆತಂಕ. ಬ್ರಶ್ಶು-ಬಣ್ಣ ನಮ್ಮ ಕೈಯಲ್ಲೇ ಇದ್ದರೂ ಈ ಜಲವರ್ಣ ನಾವು ಅಂದುಕೊಂಡಂತೆ ಅಪ್ಲೈ ಆಗುವುದಿಲ್ಲ. ಅದು ಹೇಳಿಕೇಳಿ ನೀರಬಣ್ಣ! ನೀರೆಂದರೆ ನಿರಾಕಾರವಾದುದಲ್ಲವೇ? ಅದು ಅಷ್ಟು ಸುಲಭವಾಗಿ ನಮ್ಮ ಕೈಗೆ ಸಿಗುವುದಿಲ್ಲ. ಆದರೆ, ಕೆಲವು ಸಿದ್ಧಹಸ್ತ ಕಲಾವಿದರು ಮಾತ್ರ ಈ ನೀರಬಣ್ಣವನ್ನು ಪಳಗಿಸಿಕೊಂಡು ಸಂಪೂರ್ಣ ತಮ್ಮ ನಿಯಂತ್ರಣದಲ್ಲಿಟ್ಟುಕೊಂಡಿರುತ್ತಾರೆ. ಆಳ (Depth) ಬೇಕೆಂದರೆ ಆಳ, ತಿಳಿ (Light) ಬೇಕೆಂದರೆ ತಿಳಿಯನ್ನು ಒಂದೇ Brush Strokeನಲ್ಲಿ ಮೂಡಿಸುತ್ತಾರೆ! ಅಂಥ ಮಹನೀಯರ ಕೃತಿಗಳು ಪವಾಡ ಸದೃಶವಾಗಿ ಕಾಣುತ್ತವೆ. ಆರು ತಿಂಗಳಿಗೊಮ್ಮೆ, ಮೂರು ತಿಂಗಳಿಗೊಮ್ಮೆ ಬ್ರಶ್ಶು ಹಿಡಿಯುವ ನನ್ನಂತಹ ಸೋಮಾರಿಯ ಕೈಹಿಡಿತಕ್ಕೆ ನೀರಬಣ್ಣ ಸಿಗಲು ಹೇಗೆ ಸಾಧ್ಯ!

ಕಾಲೇಜಿನಲ್ಲಿ ನನ್ನಂತೆ ಯಾರೂ ಪೋರ್ಟ್ರೇಟ್ ಮಾಡುತ್ತಿರಲಿಲ್ಲ ಬಿಡಿ. ಈ ವಿಷಯದಲ್ಲಿ ಎಲ್ಲರಿಗಿಂತಲೂ ಹೆಚ್ಚಿನ ಅಂಕಗಳು ನನಗೆ ಬರುತ್ತಿದ್ದವು. ಪೋರ್ಟ್ರೇಟ್ ನನ್ನ ಫೆವರಿಟ್ ಸಬ್ಜೆಕ್ಟ್ ಆಗಿತ್ತು. ಲಿನೋ ಕಟ್, ಉಡ್ ಕಟ್, ಕೋಲಾಜ್ – ಹೀಗೆ ಮಾಧ್ಯಮಗಳು ಬದಲಾದರೂ ನಾನು ಮಾತ್ರ ಎಲ್ಲದರಲ್ಲೂ ಪೋರ್ಟ್ರೇಟ್‌ಅನ್ನೇ ಮುಂದು ಮಾಡುತ್ತಿದ್ದೆ. 'ರಾಜ್ ಫ್ರಮ್ ರಾಜಣ್ಣ' – ಕೋಲಾಜ್ ಮಾಧ್ಯಮದಲ್ಲಿ ನಾನು ಮಾಡಿದ್ದ ರಾಜ್‌ಕುಮಾರರವರ ಭಾವಚಿತ್ರವನ್ನು ನೋಡಿ ಇಡೀ ಕಾಲೇಜ್ ನನ್ನ ಹಾಡಿ ಹೊಗಳಿತ್ತು. ಈ ಕೃತಿಯ ವಿಶೇಷವೆಂದರೆ, ರಾಜಕುಮಾರ್ ಅವರ ಚಿತ್ರದ ಕಾಗದ ತುಣುಕುಗಳನ್ನೇ ಬಳಸಿ ಅಣ್ಣಾವ್ರ ಚಿತ್ರ ಮಾಡಿದ್ದು. ನಾವು ನಾಲ್ವರು ಸಹಪಾಠಿಗಳು ಸೇರಿ ಒಂದು ಕಾರ್ಯಕ್ರಮ ಹಮ್ಮಿಕೊಂಡಿದ್ದೆವು. ಉದ್ಘಾಟನಾ ಕಾರ್ಯಕ್ರಮದಲ್ಲಿ ನಾನು ಮುಖ್ಯ ಅತಿಥಿಯೊಬ್ಬರ ಭಾವಚಿತ್ರದ ಪ್ರಾತ್ಯಕ್ಷಿಕೆ ನೀಡಿದ್ದೆ.



ಕಾಗದದ ಗುಣಮಟ್ಟದಿಂದಾಗಿ ಬಣ್ಣ ಮಂಕೆನ್ನಿಸಿದರೂ ಪಟ್ಟುಬಿಡದೆ ರೂಪಿಸಿದ ಮಲ್ಲಿಕಾ ಘಂಟಿ ಕಲಾಕೃತಿ



ಅಪರಿಚಿತನ ಚಿತ್ರದಲ್ಲಿ ತೀವ್ರಗೊಂಡಿರುವ ಬಣ್ಣದ ಬೀಸುಗಳು